Downloaded From : http://cbseportal.com/

This Question Paper consists of 31 questions 8 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 31 ಪ್ರಶ್ನೆಗಳಿದ್ದು 8 ಮುದ್ರಿತ ಪುಟಗಳನ್ನು ಹೊಂದಿದೆ.

Roll No. / ರೋಲ್ ನಂ. | | | | | | | | | | | | |

**Code No. / ಕೋಡ್ ನಂ.** **59/S/O/K**

**Set / ಸೆಟ್** **A**

# KANNADA
# ಕನ್ನಡ
# (208)

Day and Date of Examination ..........................................
(ಪರೀಕ್ಷೆಯ ದಿನ ಮತ್ತು ತಾರೀಖು)

Signature of Invigilators 1. ..........................................
(ಉಸ್ತುವಾರಿದಾರರ ರುಜು)

2. ..........................................

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿವೆಯೇ ಎಂದು ಪರೀಕ್ಷಿಸಿ. ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C) ಮತ್ತು (D) ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದುವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಹಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆಪತ್ರಿಕೆಯ ಕೋಡ್ ನಂಬರ್ 59/S/O/K ಸೆಟ್ A ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



Downloaded From : http://cbseportal.com/ Courtesy : NIOS

Downloaded From : http://cbseportal.com/

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ ಗರಿಷ್ಠ ಅಂಕಗಳು : 100

**ಸೂಚನೆಗಳು:** (i) ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(ii) ಪ್ರಶ್ನೆ ಮತ್ತು ಉಪ-ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(iii) ಪ್ರಶ್ನೆ 1ರಿಂದ 11ರ ವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

**1.** ಸಣ್ಣ ಕತೆಗಳ ಜನಕ ______ 1

(A) ಕುವೆಂಪು (B) ಅಂಬಿಕಾತನಯದತ್ತ

(C) ಶ್ರೀನಿವಾಸ (D) ಆನಂದಕಂದ

**2.** ಭರತಭೂಮಿ ನನ್ನ ______ 1

(A) ತಂದೆ (B) ಮಾವ

(C) ತಾಯಿ (D) ಅಕ್ಕ

**3.** ಲೇಖಕರ ನಾಯಿಯ ಹೆಸರು ______ 1

(A) ಕಿವಿ (B) ಟಾಮಿ

(C) ರಾಜು (D) ಮೂಗು

**4.** ರಾಕ್ಷಸರಿಬ್ಬರೂ ಹೇಗೆ ಸತ್ತರೆಂದರೆ ______ 1

(A) ಗಿಳಿಯನ್ನು ನೋಡಿದ್ದರಿಂದ (B) ಗಿಳಿ ಓಡಿದ್ದರಿಂದ

(C) ಗಿಳಿಯ ಕತ್ತನ್ನು ಕತ್ತರಿಸಿದ್ದರಿಂದ (D) ಗಿಳಿ ಹಾರಿದ್ದರಿಂದ

**5.** ನಂಬೆಣ್ಣನಿಗೆ ಒಲಿದವನು ______ 1

(A) ಮನುಷ್ಯ (B) ತಂದೆ

(C) ಶಿವ (D) ಆನೆ



Downloaded From : http://cbseportal.com/ Courtesy : NIOS

Downloaded From : http://cbseportal.com/

**6.** 'ಶಾಲುಸಾಬಿ' ಪಾಠವನ್ನು ______ ಕೃತಿಯಿಂದ ಆರಿಸಲಾಗಿದೆ. 1

(A) ನಮ್ಮೂರಿನ ರಸಿಕರು (B) ನಾಕುತಂತಿ

(C) ಮೆರವಣಿಗೆ (D) ಕ್ರೌಂಚವಧೆ

**7.** 'ಭಯ' ಕಾಯಿಲೆಯ ಚಿಹ್ನೆಗಳನ್ನು ______ 1

(A) ಕಡಿಮೆ ಮಾಡುತ್ತದೆ (B) ನೋಡುತ್ತದೆ

(C) ಮಾತನಾಡುತ್ತದೆ (D) ಹೆಚ್ಚಿಸುತ್ತದೆ

**8.** ಬಸವಣ್ಣನವರು ತಂದೆ-ತಾಯಿ ಎಂದಿರುವುದು ______ 1

(A) ದೇವರಿಗೆ (B) ಕೂಡಲಸಂಗಮನಿಗೆ

(C) ಮಲ್ಲಿಕಾರ್ಜುನನಿಗೆ (D) ರಾಮನಾಥನಿಗೆ

**9.** ಕಾರಮಕ್ಕ ಎಂದರೆ ______ 1

(A) ಕಾರಯ್ಯನ ಮಕ್ಕಳು (B) ಅಯ್ಯನ ಮಕ್ಕಳು

(C) ಅಮ್ಮನ ಮಕ್ಕಳು (D) ಕಪ್ಪನೆಯ ಮಕ್ಕಳು

**10.** ಡಾರ್ವಿನ್‌ನ ವಿಕಾಸವಾದದಂತೆ ಮನುಷ್ಯನ ಮೂಲ ______ 1

(A) ದೇವರು (B) ಅಮೀಬ

(C) ಮಂಗ (D) ಚಿಂಪಾಂಜಿ

**11.** ಹುಟ್ಟದ ______ 1

(A) ವಸ್ತುಗಳಿಲ್ಲ (B) ಯೋನಿಗಳಿಲ್ಲ

(C) ಭೂಮಿಗಳಿಲ್ಲ (D) ಪ್ರಾಣಿಯಿಲ್ಲ

**12.** ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :

ರೈತನನ್ನು ಅನ್ನದಾತ ಎನ್ನುತ್ತಾರೆ. ಏಕೆಂದರೆ ಅವನು ನಮಗೆಲ್ಲಾ ಅನ್ನ ಸಿಗುವಂತೆ ಮಾಡುತ್ತಾನೆ. ಅವನು ಹೊಲ-ಗದ್ದೆಗಳಲ್ಲಿ ಬೆಳೆ ಬೆಳೆಯದಿದ್ದರೆ ನಮಗೆ ಅನ್ನ ಸಿಗುವುದಿಲ್ಲ. ಆದುದರಿಂದ ನಮ್ಮ ಪಾಲಿಗೆ ಅವನು ಅನ್ನದಾತನಾಗಿದ್ದಾನೆ. ರೈತ ಬಹಳ ಕಷ್ಟಜೀವಿ. ಅವನು ಬೆಳಗಿನಿಂದ ಸಂಜೆಯ ತನಕ ಹೊಲ-ಗದ್ದೆಗಳಲ್ಲಿ ದುಡಿಯುತ್ತಾನೆ. ಮಳೆ, ಬಿಸಿಲು, ಚಳಿ, ಗಾಳಿಗಳನ್ನು ಸಹಿಸಿಕೊಳ್ಳುತ್ತಾನೆ. ಕಷ್ಟಪಟ್ಟು ದವಸ-ಧಾನ್ಯಗಳನ್ನು ಬೆಳೆಯುತ್ತಾನೆ.

ರೈತ ತುಂಬಾ ಸರಳಜೀವಿ. ಅವನು ತೊಡುವ ಉಡುಪು ಸರಳ. ಅವನು ಸೇವಿಸುವ ಆಹಾರವೂ ಸರಳ. ದೀಪವೂ ತಾನು ಉರಿಯುತ್ತದೆ, ಇತರರಿಗೆ ಬೆಳಕು ಕೊಟ್ಟು ಉಪಕಾರ ಮಾಡುತ್ತದೆ. ರೈತನೂ ಸಹ ತಾನು ವರ್ಷವೆಲ್ಲಾ ಕಷ್ಟಪಡುತ್ತಾನೆ. ಇತರರಿಗೆ ಸುಲಭವಾಗಿ ಅನ್ನ ಸಿಗುವಂತೆ ಮಾಡುತ್ತಾನೆ. ಅವನ ಸೇವೆ ದೊಡ್ಡದು. ಅವನ ಪರೋಪಕಾರ ದೊಡ್ಡದು. ಆದುದರಿಂದ ನಾವು ಅನ್ನದಾತನಿಗೆ ಜಯವಾಗಲಿ ಅನ್ನೋಣ. ನಮ್ಮ ಲಾಲ್‌ಬಹದ್ದೂರ್ ಶಾಸ್ತ್ರಿಯವರು 'ಜೈ ಜವಾನ್ ಜೈ ಕಿಸಾನ್' ಎಂದರು.



Downloaded From : http://cbseportal.com/ Courtesy : NIOS

Downloaded From : http://cbseportal.com/

**ಪ್ರಶ್ನೆಗಳು :**

(ಕ) ಅವನು ನಮಗೆಲ್ಲಾ ________ ಸಿಗುವಂತೆ ಮಾಡುತ್ತಾನೆ. 1

(A) ಬೆಳೆ (B) ಹಣ್ಣು

(C) ಅನ್ನ (D) ಹಣ

(ಖ) ರೈತ ಬಹಳ ________ 1

(A) ಸೋಮಾರಿ (B) ಹಠಮಾರಿ

(C) ಆಶ್ರಯಜೀವಿ (D) ಕಷ್ಟಜೀವಿ

(ಗ) ನಮ್ಮ ಪಾಲಿಗೆ ಅವನು ಏನಾಗಿದ್ದಾನೆ? 1

(ಘ) ರೈತ ಏನನ್ನು ಸಹಿಸಿಕೊಳ್ಳುತ್ತಾನೆ? 2

(ಙ) ಅವನು ದುಡಿಯುವ ಸಮಯ ಯಾವುದು? 2

(ಚ) ರೈತನ ಉಡುಪು ಹೇಗಿರುತ್ತದೆ? 1

(ಛ) ದೀಪವು ಹೇಗೆ ಉಪಕಾರ ಮಾಡುತ್ತದೆ? 2

(ಜ) ಏಕೆ ಅನ್ನದಾತನಿಗೆ ಜಯವಾಗಲಿ ಅನ್ನಬೇಕು? 2

(ಝ) ಲಾಲ್ ಬಹದ್ದೂರ್ ಶಾಸ್ತ್ರಿಯವರು ಹೇಳಿದ ಮಾತು ಯಾವುದು? 1

**13.** ಕೊಟ್ಟಿರುವ ಪದ್ಯವನ್ನು ಓದಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :

ಕೇಳಿ ಗಿಳಿಗಳೇ, ಏಳಿರೀಗಲೇ
ಕೋಳಿ ಕೂಗಿದೆ ಆಗಲೇ!
ರವಿಯ ಕಿರಣದ ರಂಗು ಹರಡಿದೆ
ಏಳಿರೇಳಿರಿ ಈಗಲೇ!!

ಮಬ್ಬು ಹರಿದಿದೆ, ನಿದ್ದೆ ಹಾರಿದೆ
ಸದ್ದು ಮಾಡದೆ ಏಳಿರಿ!
ತಂಪು ಗಾಳಿಯು ತೀಡುತಿರುವುದು
ಏಳಿ ಪುಲಕಿತರಾಗಿರಿ!!

ಮನೆಯ ಕೆಲಸಕೆ-ನೆರವು ನೀಡಿರಿ
ತಂದೆ-ತಾಯಿಗಳಿಗೆ ಹರುಷದಿ!
ಪ್ರೀತಿಯಿಂದಲಿ ಹಸುವು ಕರುವಿನ
ಮೈಯ ತೊಳೆಯಿರಿ ಚಂದದಿ!!



Downloaded From : http://cbseportal.com/ Courtesy : NIOS

Downloaded From : http://cbseportal.com/

**ಪ್ರಶ್ನೆಗಳು :**

(ಕ) ಏನು ಕೂಗಿದೆ? 1

(A) ಗಿಳಿ (B) ರವಿ

(C) ಕೋಳಿ (D) ನಿದ್ದೆ

(ಖ) ರವಿಯ ಕಿರಣದ ರಂಗು ಹರಡಿದೆ.
'ರವಿ' – ಇದರ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ. 1

(ಗ) ಮನೆಯ ಕೆಲಸಕೆ ನೆರವು ನೀಡಿರಿ
ತಂದೆ-ತಾಯಿಗಳಿಗೆ ಹರುಷದಿ
ತಂದೆ-ತಾಯಿಗಳಿಗೆ ಮಕ್ಕಳು ಯಾವ ರೀತಿ ಸಹಾಯ ಮಾಡಬೇಕು? ಒಂದೆರಡು ವಾಕ್ಯಗಳಲ್ಲಿ ಬರೆಯಿರಿ. 2

(ಘ) ಪ್ರೀತಿಯಿಂದಲಿ ಹಸುವು ಕರುವಿನ
ಮೈಯ ತೊಳೆಯಿರಿ ಚಂದದಿ
ನಾಲ್ಕು ಸಾಕುಪ್ರಾಣಿಗಳ ಹೆಸರು ಬರೆಯಿರಿ. 2

**14.** ಗಂಡನಿಗೆ ಇದಿರಾಡಿದ ಸಾಧ್ವಿ ಯಾರು? 1

**15.** ಅ. ರಾ. ಮಿತ್ರ ಅವರು ಯಾವಾಗ ಜನಿಸಿದರು? 1

**16.** 'ತ್ರಿಪದಿ' ಎಂದರೆ ಎಷ್ಟು ಸಾಲುಗಳು? 1

**17.** ಕಥಾನಾಯಕ ಯಾವ ಪದವಿಯನ್ನು ಪಡೆದಿದ್ದ? 1

**18.** (ಕ) ಒಂದು ಕಾಲಕ್ಕೆ ಕಂಪ್ಯೂಟರ್ ಪದದ ಅರ್ಥ ಏನಿತ್ತು? 1

(ಖ) ತೆತ್ತೋರು, ಅತ್ತೋರು, ಬಿದ್ದೋರು, ಜನಗಳು
ಇಲ್ಲಿ ಗುಂಪಿಗೆ ಸೇರದ ಪದ ________ 1

**19.** ಕೆಳಗಿನವುಗಳಿಗೆ ಉತ್ತರಿಸಿರಿ :

(ಕ) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ : 2

*(i)* ರಥೋತ್ಸವ

*(ii)* ಧರ್ಮಾವತಾರ

*(iii)* ಈಗೀಗ

ಅಥವಾ

'ಗಾರ' ಪ್ರತ್ಯಯ ಸೇರಿಸಿ 2 ಶಬ್ದಗಳನ್ನು ತಯಾರಿಸಿರಿ.

(ಖ) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ : 2

*(i)* ಇತಿ + ಆದಿ

*(ii)* ಔಷಧ + ಉಪಚಾರ

*(iii)* ಪೌಷ್ಟಿಕ + ಅಂಶ



Downloaded From : http://cbseportal.com/ Courtesy : NIOS

Downloaded From : http://cbseportal.com/

ಅಥವಾ

ಚಿಕಿತ್ಸೆಯನ್ನು, ಮನೆಗೆ, ಪರೀಕ್ಷೆಯಲ್ಲಿ

ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಬಿಡಿಸಿ ಬರೆಯಿರಿ (ಎರಡಕ್ಕೆ).

(ಗ) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದ ಬರೆಯಿರಿ : 2

*(i)* ಅಗತ್ಯ

*(ii)* ಅನುಕೂಲ

*(iii)* ಭಯ

ಅಥವಾ

ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ :

*(i)* ಎಕ್ಸ್‌ರೇಯಿಂದ <u>ಶರೀರಕ್ಕೆ</u> ಅಪಾಯ ಉಂಟಾಗುತ್ತದೆ.

*(ii)* ಕಾಯಿಲೆ ಬಂದಾಗ ವೈದ್ಯರ <u>ಬಳಿಗೆ</u> ಹೋಗಬೇಕು.

**20.** ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ : 2

(ಕ) ಕಾಲಿಗೆ ಬುದ್ಧಿಹೇಳು

(ಖ) ನಾಮ ಹಾಕು

(ಗ) ಕಣ್ಣೀರು ಸುರಿಸು

**21.** 'ನರೇಶ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ? 1

**22.** ಹ್ಯುಯೆನ್-ತ್ಸಾಂಗ್ ಇಂಡಿಯಾ ದೇಶಕ್ಕೆ ಹೇಗೆ ಬಂದನು? ವಿವರಿಸಿ. 4

**23.** ಪ್ರೀತಿಯು ನಮ್ಮ ಭಾವನೆಗೆ, ಕಲ್ಪನೆಗೆ ಸಿಗಲಾರದು. ಹೇಗೆ? ನಿರೂಪಿಸಿರಿ. 5

**24.** ತಪ್ಪು ಮಾಡಿದರೆ ಅದರ ಫಲವನ್ನು ಅನುಭವಿಸಬೇಕಾಗುತ್ತದೆ. ರಾವಣ ಇದಕ್ಕೆ ಜೀವಂತ ಉದಾಹರಣೆ. ಸಮರ್ಥಿಸಿರಿ. 5

ಅಥವಾ

ಸೀತೆ-ಮಂಡೋದರಿಯರ ಪೂಜಾ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**25.** ಕೊಟ್ಟಿರುವ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಎರಡು ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ಮಾತುಗಳಲ್ಲಿ ಬರೆಯಿರಿ : 2+2=4

(ಕ) ನುಚ್ಚು-ನೂರು

(ಖ) ಬಟ್ಟೆ-ಬರೆ

(ಗ) ತಿಂಡಿ-ತಿನಿಸು



Downloaded From : http://cbseportal.com/ Courtesy : NIOS

Downloaded From : http://cbseportal.com/

**26.** ಕೊಟ್ಟಿರುವ ಅಂಕಿ-ಅಂಶಗಳ ಸಹಾಯದಿಂದ ಕ್ರಿಸ್ತರಾಜ ವಿದ್ಯಾಲಯ, ಚಾಮರಾಜನಗರ, ಇಲ್ಲಿನ ಅಧ್ಯಯನ ಕೇಂದ್ರಗಳ ದಾಖಲಾತಿಯ ಸಾಧನೆಯನ್ನು ತೋರಿಸುವ ಸರಳ ಸ್ತಂಭ (ದಂಡ) ಚಿತ್ರವನ್ನು ರಚಿಸಿರಿ : 5

| ವರ್ಷ | 2008 | 2009 | 2010 | 2011 | 2012 | 2013 | 2014 | 2015 | 2016 | 2017 |
|---|---|---|---|---|---|---|---|---|---|---|
| ಅಧ್ಯಯನ ಕೇಂದ್ರಗಳು | 7 | 2 | 4 | 10 | 16 | 21 | 8 | 15 | 20 | 18 |

ಅಥವಾ

ನೀವು ಮಹೇಶ್ ತಂದೆ ಗಣೇಶ್, ಊರು-ಧಾರವಾಡ, ಬಿ.ಎ.ಪದವೀಧರ ಎಂದು ಭಾವಿಸಿ ಕೆಳಗಿನ ಅರ್ಜಿಯನ್ನು ತುಂಬಿರಿ.

ಗೆ,

ಶರಣ ಬಸವ ಅಪ್ಪ

ವಿದ್ಯಾಸಂಸ್ಥೆ

ಗುಲ್ಬರ್ಗಾ

ಉದ್ಯೋಗದ ಹೆಸರು – ಪ್ರಥಮ ದರ್ಜೆ ಗುಮಾಸ್ತ

ಪ್ರ. ನಂ. ದಿ. – ಆರ್.ಪಿ. 8/17-18, ದಿನಾಂಕ – 9-11-2017

ಹೆಸರು : ........................................

ತಂದೆ : ........................................

ಜನ್ಮಸ್ಥಳ : ........................................

ಹುಟ್ಟಿದ ದಿನಾಂಕ : ........................................

ಪೂರ್ಣ ವಿಳಾಸ : ........................................

ರಾಷ್ಟ್ರೀಯತೆ : ........................................

ಮತ/ಜಾತಿ : ........................................

ವಿದ್ಯಾರ್ಹತೆ : ........................................

ಅನುಭವ : ........................................

ಓದಿದ ಶಾಲೆಯಿಂದ ದೃಢೀಕರಣ ಪತ್ರ : ........................................

ಬ್ಯಾಂಕ್/ಅಂಚೆ ಕಛೇರಿಯ ಹೆಸರು : ........................................

ಖರೀದಿಸಿದ : ಡಿ.ಡಿ./ಪಿ.ಓ. ನಂ : ........................................

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೇನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳೂ ನಿಜ ಎಂದು ಪ್ರಮಾಣ ಮಾಡುತ್ತೇನೆ.

ಧನ್ಯವಾದಗಳು

ತಮ್ಮ ವಿಧೇಯ

ಹಸ್ತಾಕ್ಷರ

(ಹೆಸರು)



Downloaded From : http://cbseportal.com/ Courtesy : NIOS

Downloaded From : http://cbseportal.com/

**27.** ಬನವಾಸಿಯಲ್ಲಿ ಪಂಚೇಂದ್ರಿಯಗಳಿಗೆ ಸುಖ ಕೊಡುವ ಅಂಶಗಳಾವುವು? 5

**28.** ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ : 1×5=5

(ಕ) ರಾಷ್ಟ್ರ ಪಿತಿ ಮಹಾತಾ ಗಾಂದೀಜಯವರೂ.
(ಶುದ್ಧರೂಪದಲ್ಲಿ ಬರೆಯಿರಿ)

(ಖ) ಏಕಲವ್ಯ ಶ್ರೇಷ್ಠ ಧನುರ್ಧಾರ. ಇಲ್ಲಿ ಧನುರ್ಧಾರ ಇದರ ಬಹುವಚನ ರೂಪ ________

(ಗ) ರಪರಪ : ಅನುಕರಣೆ ನುಡಿ : : ಓಡೋಡಿ ________

(ಘ) ಲಕ್ಷ್ಮಣನು ರಾಮನ ಸಂಗಡ ಕಾಡಿಗೆ ಹೋದನು....
(ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿರಿ)

(ಙ) ಆಹಾ ಎಷ್ಟೊಂದು ಸುಂದರ ದೃಶ್ಯವಿದು....
(ಇಲ್ಲಿ ಇರಬೇಕಾದ ಲೇಖನ ಚಿಹ್ನೆ)

**29.** ನಿಮ್ಮನ್ನು ನಿಂಗಪ್ಪ ಉಳ್ಳಾಗಡ್ಡಿ/ಬಾಳಮ್ಮ ಮೇಗಿನಮನಿ, ಅಂಬೇಡ್ಕರ ಬೀದಿ, ಜೇವರಗಿ ತಾಲ್ಲೂಕು, ಬೀದರ್ ಜಿಲ್ಲೆ ಎಂದು ಭಾವಿಸಿ ಶ್ರೀ ಬರಗೂರು ರಾಮಚಂದ್ರಪ್ಪ, ಪಠ್ಯ ರಚನಾ ಸಮಿತಿಯ ಅಧ್ಯಕ್ಷರು, ಪಂಪ ಮಹಾಕವಿ ರಸ್ತೆ, ಬೆಂಗಳೂರು-1 ಇವರಿಗೆ ಅಖಂಡ ಕರ್ನಾಟಕದ ಏಳಿಗೆಯಲ್ಲಿ ಉತ್ತರ ಕರ್ನಾಟಕದ ಕೊಡುಗೆಯನ್ನು ನೆನಪಿಸಿ, ಪಠ್ಯಪುಸ್ತಕಗಳಲ್ಲಿ ಅಳವಡಿಸುವಂತೆ ಕೋರಿ ಒಂದು ಪತ್ರ ಬರೆಯಿರಿ. 7

ಅಥವಾ

ನವೋದಯ ವಿದ್ಯಾಲಯ, ಧಾರವಾಡದಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ದೀಪರಾಜ/ದೀಪಶ್ರೀ ಎಂದು ಭಾವಿಸಿ, ಗಾಂಧೀಜಿ ನಗರ, ಬೆಳಗಾವಿಯಲ್ಲಿರುವ ನಿಮ್ಮ ತಾಯಿಗೆ ನಿಮ್ಮ ಪರೀಕ್ಷೆ ತಯಾರಿ ಕುರಿತು ವಿವರಿಸುತ್ತಾ, ಒಂದು ಪತ್ರ ಬರೆಯಿರಿ.

**30.** ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು 50 ಶಬ್ದಗಳಿಗೆ ಮೀರದಂತೆ ಬರೆಯಿರಿ : 5

(ಕ) ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ

(ಖ) ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

(ಗ) ದುಡಿಮೆಯ ನಂಬಿ ಬದುಕು, ಅದರಲಿ ದೇವರ ಹುಡುಕು

**31.** ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 200 ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ: 10

(ಕ) ನನ್ನ ಜೀವನದ ಗುರಿ

(ಖ) ದೂರದರ್ಶನ

(ಗ) ಸ್ವಚ್ಛ ಭಾರತ ಅಭಿಯಾನ

★ ★ ★



Downloaded From : http://cbseportal.com/ Courtesy : NIOS